RNU AIR DHARWAD

MARCH 16, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ರಾಜ್ಯದ 5 ಸಾವಿರದ 9 ನೂರಾ 51 ಗ್ರಾಮ** ಪಂಚಾಯಿತಿಗಳಿಗೆ, ಧಾರವಾಡದ, ಸಿ.ಎಂ.ಡಿ.ಆರ್. ದಿಂದ, ಹಣಕಾಸು ನಿರ್ವಹಣೆ ಮಾರ್ಗಸೂಚಿ.
- **ಜನ ಸಾಮಾನ್ಯರಿಗೆ,** ಸಕಾಲಕ್ಕೆನ್ಯಾಯ ದೊರಕಿದಲ್ಲಿ, ನ್ಯಾಯಾಂಗದ ಸಾರ್ಥಕತೆ – ನ್ಯಾಯಮೂರ್ತಿ, ರಾಮಸುಬ್ರಮಣಿಯನ್.
- **"ಸುರಕ್ಷಿತ ಉತ್ಪನ್ನಗಳು; ಆತ್ಮವಿಶ್ವಾಸದ ಗ್ರಾಹಕರು",** ಧ್ಯೇಯದೊಂದಿಗೆ, ವಿಶ್ವಗ್ರಾಹಕ ಹಕ್ಕುಗಳ ದಿನಾಚರಣೆ, ಸಂಪನ್ನ.
- **ಇಂದು, ರಾಷ್ಟ್ರೀಯ,** ರೋಗ ನಿರೋಧಕ, ಲಸಿಕೆ ದಿನ.

<><><>

**ಈಗ ವಾರ್ತೆಗಳ ವಿವರ**

<><><>

**ಧಾರವಾಡದ, ಸೆಂಟರ್ ಫಾರ್** ಮಲ್ಟಿ–ಡಿಸಿಪ್ಲಿನರಿಡೆವಲಪ್ಮೆಂಟ್ ರಿಸರ್ಚ್ – ಸಿ.ಎಂ.ಡಿ.ಆರ್.ಸಂಸ್ಥೆ, ಜಿಲ್ಲಾ ಪಂಚಾಯಿತಿ ಆದಿಯಾಗಿ, ರಾಜ್ಯದ ಎಲ್ಲ ತಾಲೂಕು ಮತ್ತು ಗ್ರಾಮ ಪಂಚಾಯಿತಿಗಳ, ಹಣಕಾಸು ಸ್ಥಿತಿ–ಗತಿ, ಸಂಪನ್ಮೂಲ ಹರಿವು ಹಾಗೂ ಸಾರ್ವಜನಿಕ ಸೇವೆಗಳ ವಿತರಣೆಯನ್ನು, ವಿಶ್ಲೇಷಿಸಿದೆ. "ಕರ್ನಾಟಕದ ಪಂಚಾಯತ್ ರಾಜ್ ಸಂಸ್ಥೆಗಳಿಗೆ, ಆರ್ಥಿಕ ವಿಕೇಂದ್ರೀಕರಣ" ಎಂಬ ಅಧ್ಯಯನ ವರದಿ ಮೂಲಕ, ತನ್ನ ಶಿಫಾರಸುಗಳನ್ನು, 5ನೇ ಹಣಕಾಸು ಆಯೋಗಕ್ಕೆ, ಸಲ್ಲಿಸಿದೆ ಎಂದು, ಸಿ.ಎಂ.ಡಿ.ಆರ್. ನಿರ್ದೇಶಕ ಬಸವಪ್ರಭು ಜಿರ್ಲಿ, ಆಕಾಶವಾಣಿಗೆ ತಿಳಿಸಿದ್ದಾರೆ. ರಾಜ್ಯದ 5 ಸಾವಿರದ 9 ನೂರಾ 51 ಗ್ರಾಮ ಪಂಚಾಯಿತಿಗಳಿಗೆ, ಹಣಕಾಸು ನಿರ್ವಹಣೆ ಮಾರ್ಗಸೂಚಿ, ಸಿ.ಎಂ.ಡಿ.ಆರ್. ಸಿದ್ಧಪಡಿಸಿದೆ.

<><><>

**ಈ ಕುರಿತು ಒಂದು ವರದಿ..**

<><><>

***ಇತ್ತೀಚಿನ ವರ್ಷಗಳಲ್ಲಿ, ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗಗಳಿಂದ ಅನುದಾನಗಳ ಹರಿವು, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ಹೆಚ್ಚುತ್ತಿದ್ದರೂ, ಪಂಚಾಯಿತಿಗಳು ಕಡಿಮೆ ಸ್ವಂತ ಆದಾಯ, ಸಿಬ್ಬಂದಿ ಕೊರತೆ, ಮೂಲಸೌಕರ್ಯಗಳ ಅಭಾವ ಮತ್ತು ಪ್ರಾದೇಶಿಕ ಅಸಮಾನತೆಗಳಂತಹ ಸವಾಲುಗಳನ್ನು ಎದುರಿಸುತ್ತಿವೆ. ಸಿ.ಎಂ.ಡಿ.ಆರ್. ಸಂಸ್ಥೆಯ, ಅರ್ಥಶಾಸ್ತ್ರಜ್ಞರಾದ, ಎಸ್.ವಿ. ಹನಗೋಡಿಮಠ ಹಾಗೂ ನಾರಾಯಣ ಬಿಲ್ಲವ ಅವರು, ಸಿ. ನಾರಾಯಣಸ್ವಾಮಿ ಅವರ ಅಧ್ಯಕ್ಷತೆಯ, ಕರ್ನಾಟಕ ರಾಜ್ಯ 5ನೇ ಹಣಕಾಸು ಆಯೋಗಕ್ಕೆ ಸಲ್ಲಿಸಿದ,ಅಧ್ಯಯನ ವರದಿ, ಪಂಚಾಯತ್ ರಾಜ್ ಸಂಸ್ಥೆಗಳ, ಹಣಕಾಸು ಸ್ವಾಯತ್ತತೆ ಮತ್ತು ಸಾಮರ್ಥ್ಯವನ್ನು ಬಲಪಡಿಸುವ ಅಗತ್ಯತೆಯನ್ನು ಸೂಚಿಸಿದೆ. ಅಧ್ಯಯನವು ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯಿತಿಗಳ ಹಣಕಾಸು ಸ್ಥಿತಿ–ಗತಿ, ಸಂಪನ್ಮೂಲ ಹರಿವು ಹಾಗೂ ಸಾರ್ವಜನಿಕ ಸೇವೆಗಳ ವಿತರಣೆಯನ್ನು ವಿಶ್ಲೇಷಿಸಿದೆ. ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕ ಪ್ರದೇಶಗಳ, ಪ್ರಾದೇಶಿಕ ಅಸಮಾನತೆಗಳನ್ನು ದೂರ ಮಾಡಿ, ಸಮತೋಲಿತ ಅಭಿವೃದ್ಧಿಯನ್ನು ಸಾಧಿಸುವ ಬಗ್ಗೆ, ವರದಿ ತಿಳಿಸುತ್ತದೆ.***

<><><>

ವರದಿ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಿ.ಎಂ.ಡಿ.ಆರ್. ಸಂಸ್ಥೆಯ, ಅರ್ಥಶಾಸ್ತ್ರಜ್ಞ, ಎಸ್.ವಿ. ಹನಗೋಡಿಮಠ.

<><><>

**ವಿವೇಕ (67) + ಡಾ. ಹನಗೋಡಿಮಠ ಧ್ವನಿ (66) ಸೆಕೆಂದುಗಳು**

<><><>

**ನೊಂದವರು, ಬಡವರು ಹಾಗೂ ಜನ ಸಾಮಾನ್ಯರಿಗೆ,** ಸಕಾಲಕ್ಕೆನ್ಯಾಯ ದೊರಕಿದಲ್ಲಿ, ನ್ಯಾಯಾಂಗ ವೃತ್ತಿಯ ಸಾರ್ಥಕತೆ ಹಾಗೂ ಸಂತೃಪ್ತಿ ದೊರೆಯುತ್ತದೆ ಎಂದು, ಹೊಸ ದಿಲ್ಲಿಯ ಸರ್ವೋಚ್ಚ ನ್ಯಾಯಾಲಯದ, ನ್ಯಾಯಮೂರ್ತಿ, ರಾಮಸುಬ್ರಮಣಿಯನ್, ಹೇಳಿದ್ದಾರೆ. ಬೆಂಗಳೂರಿನ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಹುಬ್ಬಳ್ಳಿಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ, ಕಾನೂನು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ, 'ತರಗತಿಯಿಂದ ಕೋರ್ಟ್ ವರೆಗೆ' ಕಾರ್ಯಾಗಾರಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ಅನು ಶಿವರಾಮನ್ ಮಾತನಾಡಿ, ಶ್ರೀಸಾಮಾನ್ಯರಿಗೆ ಕಾನೂನುಗಳ ಬಗ್ಗೆ, ಅರಿವು ಮತ್ತು ನೆರವು ದೊರಕಿಸಲು, ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಯನಿರ್ವಹಿಸುತ್ತಿದೆ ಎಂದರು.

<><><>

**ಭಾರತ ಚುನಾವಣಾ ಆಯೋಗ,** ಕರ್ನಾಟಕದ ಬಾಗಲಕೋಟೆಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ, ಉಪ ಚುನಾವಣೆಗೆ, ಏಪ್ರಿಲ್ 9, ಗುರುವಾರ ಮತದಾನ ನಿಗದಿಗೊಳಿಸಿ, ಪ್ರಕಟಿಸಿದೆ. ಶಾಸಕ, ಹುಲ್ಲಪ್ಪ ಯಮನಪ್ಪ ಮೇಟಿ ಅವರ ನಿಧನದಿಂದ, ತೆರವಾಗಿರುವ ಬಾಗಲಕೋಟೆ ವಿಧಾನಸಭಾ ಕ್ಷೇತ್ರ, ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ, ತೆರವಾಗಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ, ಉಪ ಚುನಾವಣೆ ಹಿನ್ನೆಲೆ, ಮತದಾನ ನಡೆಯಲಿದೆ. ಮತ ಎಣಿಕೆ, ಮೇ 4ನೇ ತಾರೀಖು ಸೋಮವಾರ ಜರುಗಲಿದೆ ಎಂದು, ಕಾರ್ಯದರ್ಶಿ ಸಂಜೀವಕುಮಾರ ಪ್ರಸಾದ, ಹೊಸ ದಿಲ್ಲಿಯಲ್ಲಿ ತಿಳಿಸಿದ್ದಾರೆ.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**“ಸುರಕ್ಷಿತ ಉತ್ಪನ್ನಗಳು: ಆತ್ಮವಿಶ್ವಾಸದ ಗ್ರಾಹಕರು”**, ಧ್ಯೇಯದೊಂದಿಗೆ, ವಿಶ್ವ ಸಂಸ್ಥೆ ನಿರ್ಣಯದಂತೆ, ವಿಶ್ವಗ್ರಾಹಕ ಹಕ್ಕುಗಳ, ದಿನಾಚರಣೆ ಜರುಗಿತು. ಗ್ರಾಹಕರ ಹಕ್ಕುಗಳು ಮತ್ತು ಅಗತ್ಯತೆಗಳ ಕುರಿತು, ಹಲವೆಡೆ ಜಾಗೃತಿ ಕಾರ್ಯಕ್ರಮಗಳು ನಡೆದ, ವರದಿಗಳು ಬಂದಿವೆ. *ಕನ್ಸ್ಯೂಮರ್ಸ್ ಇಂಟರ್‌ನ್ಯಾಶನಲ್ ಫೋರಂ,* 2026ರ ಗ್ರಾಹಕರ ಹಕ್ಕುಗಳ ದಿನಾಚರಣೆಯಂದು, ‘ಉತ್ಪನ್ನಗಳ ಸುರಕ್ಷತೆ, ಪ್ರಮುಖ ಮಾನವ ಹಕ್ಕು’ ಎಂಬ ಅಭಿಯಾನ ಹಾಗೂ ಡಿಜಿಟಲ್ ಮಾರುಕಟ್ಟೆಯಲ್ಲಿ, ಬಲವಾದ ನಿಯಮಗಳ ಅನುಷ್ಠಾನವನ್ನು, ಖಾತ್ರಿಪಡಿಸಲು ಒತ್ತಾಯಿಸಿದೆ.

<><><>

**ಗ್ರಾಹಕ ಹಕ್ಕುಗಳ ಪರಿಣಿತ,** ಧಾರವಾಡ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ, ಬಸವಪ್ರಭು ಹೊಸಕೇರಿ ಅವರು, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಪ್ರೊ. ಬಸವಪ್ರಭು ಹೊಸಕೇರಿ ಧ್ವನಿ 60 ಸೆಕೆಂದುಗಳು**

<><><>

**ಸಾಂಕ್ರಾಮಿಕ ರೋಗಗಳ ನಿರ್ಮೂಲನೆ** ಮತ್ತು ಆರೋಗ್ಯಯುತ ರಾಷ್ಟ್ರ ನಿರ್ಮಾಣದಲ್ಲಿ, ಲಸಿಕೆಯ ಮಹತ್ವದ ಕುರಿತು, ಜಾಗೃತಿ ಮೂಡಿಸಲು, ಇಂದು, ರಾಷ್ಟ್ರೀಯ ಲಸಿಕೆ ದಿನ ಅಥವಾ ರಾಷ್ಟ್ರೀಯ ರೋಗ ನಿರೋಧಕ ದಿನವಾಗಿ, ದೇಶಾದ್ಯಂತ ಆಚರಿಸಲಾಗುತ್ತಿದೆ. 1995ರ, ಮಾರ್ಚ್ 16 ರಂದು, ಪ್ರಥಮ ಬಾರಿಗೆ, ಭಾರತದಲ್ಲಿ, ‘ಬದುಕಿಗಾಗಿ ಎರಡು ಹನಿ’ ಎಂಬ ಧ್ಯೇಯದೊಂದಿಗೆ, ಪೋಲಿಯೋ ಹನಿಯನ್ನು, ಮೌಖಿಕವಾಗಿ ಐದು ವರ್ಷದ ಮಕ್ಕಳಿಗೆ, ಲಸಿಕೆ ನೀಡಿದ ದಿನವಾಗಿ, ಸ್ಮರಿಸಲಾಗುತ್ತದೆ. ಮಕ್ಕಳನ್ನು ಬಾಧಿಸುವ, ಮಾರಕ ರೋಗಗಳಾದ, ಪೋಲಿಯೋ, ಕ್ಷಯ, ದಡಾರ, ರುಬೆಲ್ಲಾ ಮತ್ತು ಹೆಪಟೈಟಿಸ್ ಬಿ, ರೋಗಗಳಿಗೆ, ಲಸಿಕೆಗಳನ್ನು ನೀಡುವ, ಸಾರ್ವತ್ರಿಕ ರೋಗ ನಿರೋಧಕ ಕಾರ್ಯಕ್ರಮದ ಕುರಿತು, ಆರೋಗ್ಯ ಶಿಬಿರಗಳ ಮೂಲಕ, ವಿಶೇ ’ ಜನ ಜಾಗೃತಿ ಅಭಿಯಾನವನ್ನು, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಯೋಜಿಸಿದೆ.

<><><>

**ನಗರ ತ್ಯಾಜ್ಯದ, ವೈಜ್ಞಾನಿಕ ಹಾಗೂ** ಪರಿಸರ ಸ್ನೇಹಿ ವಿಲೇವಾರಿಗೆ,ಖಾಸಗಿ ಸಹಭಾಗಿತ್ವದಲ್ಲಿ, ಘಟಕಗಳನ್ನು ನಿರ್ವಹಿಸಲು, ರಾಜ್ಯಾದ್ಯಂತ ಚಾಲನೆ ನೀಡಲಾಗಿದೆ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ, ತಿಳಿಸಿದ್ದಾರೆ. ಗದಗ ಹೊರವಲಯದ ಬಳಗಾನೂರು ರಸ್ತೆಯ, ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಗದಗ ನಗರಸಭೆಯ, 25 ಎಕರೆ ತ್ಯಾಜ್ಯ ವಿಲೇವಾರಿ ಘಟಕದಲ್ಲಿ, 5 ಎಕರೆ ಖಾಸಗಿ ಸಂಸ್ಥೆಗೆ ಹಸ್ತಾಂತರಿಸಲಾಗುವುದು, ಎಂದರು.

<><><>

**ಪ್ರಸಕ್ತ ಸಾಲಿನ ಆಯವ್ಯಯದಲ್ಲಿ,** ಮುಖ್ಯಮಂತ್ರಿ ಸಿದ್ದರಾಮಯ್ಯ, ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ, 2 ಕೋಟಿ ರೂಪಾಯಿ ಅನುದಾನ ಒದಗಿಸಿದ್ದು, ಸಂಘದ ಕಾರ್ಯದರ್ಶಿ ಶಂಕರ ಹಲಗತ್ತಿ, ಕೃತಜ್ಞತೆ ಸೂಚಿಸಿದ್ದಾರೆ. ಸಂಘದ ಆಡಳಿತ ಮಂಡಳಿ, ಜನ ಪ್ರತಿನಿಧಿಗಳು, ನಾಡಿನ ಚಿಂತಕರಿಗೂ, ಅನುದಾನ ದೊರಕಿಸಲು ಪ್ರಯತ್ನಿಸಿದಕ್ಕೆ, ಧನ್ಯವಾದ ಸಲ್ಲಿಸಿದೆ. ಕನ್ನಡ ನಾಡು–ನುಡಿ ಮತ್ತು ಸಂಸ್ಕೃತಿಯ ವರ್ಧನೆಗೆ, ಸಂಘ ಶ್ರಮಿಸಲಿದೆ ಎಂದು, ಹರ್ಷ ವ್ಯಕ್ತ ಪಡಿಸಿದೆ.

**ಭಾರತೀಯ ಕ್ರಿಕೆಟ್‌ಗೆ,** ಅನುಪಮ ಕೊಡುಗೆ ನೀಡಿದ,ರಾಹುಲ ದ್ರಾವಿಡ ಹಾಗೂ ರೋಜರ್ ಬಿನ್ನಿ ಅವರು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ–ಬಿ.ಸಿ.ಸಿ.ಐ., ಪ್ರದಾನಿಸುವ, ಕರ್ನಲ್ ಸಿ.ಕೆ.ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿದರು. ಹೊಸ

ದಿಲ್ಲಿಯಲ್ಲಿ ಬಿ.ಸಿ.ಸಿ.ಐ. ಆಯೋಜಿಸಿದ್ದ, ನಮನ್ ಪ್ರಶಸ್ತಿ–2026 ಪ್ರದಾನ ಸಮಾರಂಭದಲ್ಲಿ, ಮಹಿಳಾ ಕ್ರಿಕೆಟ್‌ನಲ್ಲಿ ವಿಶೇಷ ಸಾಧನೆಗೈದ, ಭಾರತ ಮಹಿಳಾ ಕ್ರಿಕೆಟ್ ತಂಡದ, ಮಾಜಿ ನಾಯಕಿ, ಮಿಥಾಲಿ ರಾಜ್ ಅವರಿಗೆ, ಬಿ.ಸಿ.ಸಿ.ಐ., ಜೀವಮಾನ ಸಾಧನೆ ಪ್ರಶಸ್ತಿ ನೀಡಿ, ಗೌರವಿಸಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಜ್ಯದ 5 ಸಾವಿರದ 9 ನೂರಾ 51 ಗ್ರಾಮ** ಪಂಚಾಯಿತಿಗಳಿಗೆ, ಧಾರವಾಡದ, ಸಿ.ಎಂ.ಡಿ.ಆರ್. ದಿಂದ, ಹಣಕಾಸು ನಿರ್ವಹಣೆ ಮಾರ್ಗಸೂಚಿ.
- **ಜನ ಸಾಮಾನ್ಯರಿಗೆ,** ಸಕಾಲಕ್ಕೆನ್ಯಾಯ ದೊರಕಿದಲ್ಲಿ, ನ್ಯಾಯಾಂಗದ ಸಾರ್ಥಕತೆ – ನ್ಯಾಯಮೂರ್ತಿ, ರಾಮಸುಬ್ರಮಣಿಯನ್.
- **"ಸುರಕ್ಷಿತ ಉತ್ಪನ್ನಗಳು; ಆತ್ಮವಿಶ್ವಾಸದ ಗ್ರಾಹಕರು",** ಧ್ಯೇಯದೊಂದಿಗೆ, ವಿಶ್ವಗ್ರಾಹಕ ಹಕ್ಕುಗಳ, ದಿನಾಚರಣೆ ಸಂಪನ್ನ.
- **ಇಂದು, ರಾಷ್ಟ್ರೀಯ,** ರೋಗ ನಿರೋಧಕ, ಲಸಿಕೆ ದಿನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>